## ಅಂಗೈಯಲ್ಲಿ ಅರಮನೆ

### ಗಂಗಾ ಪಾನದ ಪ್ರಸಂಗ

ನಮ್ಮ ಪರಿಚಿತರೊಬ್ಬರ ಮನೆಗೆ ಸೀಮಂತಕ್ಕೆ ಹೋಗಿದ್ದೆವು. ಕಾರ್ಯಕ್ರಮ ಮುಗಿಯುತ್ತಿದ್ದಂತೆ, ಗರ್ಭಿಣಿಗೆ ಉಡುಗೊರೆ ನೀಡಿ, ನಾನು ಮತ್ತು ನನ್ನ ಬೀಗಿತ್ತಿ ಇಬ್ಬರೂ ನೀರು ಕುಡಿಯಬೇಕೆಂದು ಅವರ ಅಡುಗೆ ಮನೆಗೆ ಹೋದೆವು. ಅಲ್ಲಿ ನಮಗೆ ಶೆಲ್ಫ್ ಮೇಲೆ ಬಿಸ್‌ಲೇರಿ ಬಾಟಲಿಯಲ್ಲಿ, ಸ್ವಲ್ಪ ಖರ್ಚಾಗಿ ಉಳಿದ ನೀರು ಕಂಡಿತು. ಸರಿ, ಅಲ್ಲೇ ಇದ್ದ ನೆಂಟರ ವಾರಗಿತ್ತಿಗೆ 'ನಮಗೆ ಕುಡಿಯಲು ನೀರು ಬೇಕು' ಎಂದಾಗ ಆಕೆ ಆ ಬಾಟಲಿಯಲ್ಲಿದ್ದ ನೀರನ್ನು ಅಲ್ಲೇ ಇಟ್ಟಿದ್ದ ಪೇಪರ್ ಲೋಟಕ್ಕೆ ಬಗ್ಗಿಸಿ ಕೊಟ್ಟರು.

ಸಿಹಿಯಾದ ಆ ನೀರನ್ನು ಕುಡಿದು ಬಾಯಾರಿಕೆ ತಣಿಸಿಕೊಂಡು ಆಕೆಗೆ ಧನ್ಯವಾದ ತಿಳಿಸಿ, ಆಚೆಗೆ ಬರಬೇಕು, ಅಷ್ಟರಲ್ಲಿ ಅಲ್ಲಿಗೆ ಮನೆಯ ಒಡತಿ ಬಂದರು. 'ಅಯ್ಯೋ, ಆ ಬಿಸ್‌ಲೇರಿ ಬಾಟಲಿಯಲ್ಲಿದ್ದ ನೀರು ಕುಡಿದ್ರಾ. ಅದು ಗಂಗೆ ನೀರು. ನಾನೇ ಪುರೋಹಿತರಿಗೆ ಸ್ವಲ್ಪ ಬಗ್ಗಿಸಿ ಕೊಟ್ಟು ಉಳಿದಿದ್ದನ್ನು ಇಟ್ಟಿದ್ದೆ' ಎಂದರು. ಆಗ, ಸಾರಿ, ನಮಗೆ ತಿಳಿಯಲಿಲ್ಲ.



ನೀವು ಬ್ಯುಸಿ ಇದ್ರಿ. ನಾವು ನೀರು ಕೇಳಿದಾಗ ನಿಮ್ಮ ವಾರಗಿತ್ತಿ ಲೋಟಗಳಿಗೆ ಬಗ್ಗಿಸಿ ಕೊಟ್ರು. ನಾವು ಕುಡಿದು ಪಾವನವಾದ್ವಿ ಎಂದಾಗ, 'ಪರ್ವಾಗಿಲ್ಲ, ಬಿಡಿ. ತಿಳಿಯದೇ ನೀವು ಗಂಗಾ ಪಾನ ಮಾಡಿ ಪಾಪ ಕಳ್ಕೊಂಡ್ರಿ' ಎಂದು ಹೇಳಿದರೂ ಆಕೆಯ ಮುಖ ಮಾತ್ರ ಅನ್ಯಾಯವಾಗಿ ಗಂಗೆ ನೀರು ಖರ್ಚಾಯ್ತು ಎನ್ನುವ ಭಾವ ಕಾಣುತ್ತಿತ್ತು.

**ಗಾಯತ್ರಿ ಮೂರ್ತಿ**

---

### 'ಸಾಲ'ಬೇಕು!

ಮಗಳು ನಿಖಿತಾ ಅಜ್ಜಿಯ ಬಳಿ ಹೋಗಿ ನನಗೆ 'ಸಾಲ' ಬೇಕು ಎಂದು ಮೌಖಿಕವಾಗಿ ಅರ್ಜಿ ಗುಜರಾಯಿಸಿದಳು!.

'ನಾನೇನು ಸಾಲ ಕೊಡಲು ಫೈನಾನ್ಸ್, ಬ್ಯಾಂಕ್ ಅಲ್ಲ; ನಿನ್ನ ಅಪ್ಪ ಅಮ್ಮ ಬ್ಯಾಂಕಿನ ಉದ್ಯೋಗದಲ್ಲಿದ್ದಾರಲ್ಲ? ಅವರ ಬಳಿ ಕೇಳು' ಎಂದರು. 'ಇಲ್ಲ ಅವರೇ ಹೇಳಿದ್ದು, ನಿಮ್ಮ ಬಳಿ ಕೇಳಲು' ಎಂದಳು ಮಗಳು. 'ನೀವು ಕೋಣೆಯಲ್ಲಿ ಪಿಂಗಾಣಿ ಭರಣಿಯಲ್ಲಿ ತುಂಬಿಟ್ಟಿರುವ ಸಾಲ ಅದು ಬೇಕು' ಎಂದಳು. ಕೊಂಕಣಿಗರು ಬಲಿತ ಹಲಸಿನ ತೊಳೆ ಬಿಡಿಸಿ ಕೆಡದಿರಲು ಉಪ್ಪಿಗೆ ಹಾಕಿ ಸಂರಕ್ಷಿಸಿಡುತ್ತಾರೆ, ಮುಂದೆ ಬಳಸಲು. ಮಳೆಗಾಲದಲ್ಲಿ ಪಲ್ಯ, ಫ್ರೈ ಮಾಡಲು; ತುಂಬಾ ರುಚಿ!. ಅಂತಹ ಹಲಸಿನ ತೊಳೆಗೆ ಕೊಂಕಣಿ ಭಾಷೆಯಲ್ಲಿ 'ಸಾಲ (ಸಾಲ್)' ಎನ್ನುತ್ತಾರೆ. ಮಗಳ ಕನ್ನಡ



ಕೊಂಕಣಿ 'ಸಾಲ'ವಾಗಿದ್ದು ಮನೆಯಲ್ಲಿ ಎಲ್ಲರಿಗೂ ನಗು ತರಿಸಿತು!.

**ನಗರ ಗುರುದೇವ್ ಭಂಡಾರ್ಕರ್**